**ಒ ಎಸ್ ನಂ. 69/2022**
**ಡಿ ಡಬ್ಲ್ಯೂ: 01**

**ದಿ: 13-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ ಎಸ್ ಟಿ ಟಿ ವಕೀಲರಿಂದ:**

ವಾದಿಯರು ನನ್ನ ಗಂಡನ ಅಕ್ಕ ತಂಗಿಯರು ಅಂದರೆ ನಿಜ. ನಮ್ಮ ಮನೆಯ ಹೆಣ್ಣು ಮಕ್ಕಳು ಅಂದರೆ ನಿಜ. ದಾವಾ ಅನುಸೂಚಿ- ಅ ಮತ್ತು ಬಿ ಇವು ಹಿರಿಯರ ಆಸ್ತಿಗಳು ಅಂದರೆ ಸರಿಯಲ್ಲ. ಸದರಿ ಜಮೀನುಗಳನ್ನು ಯಾರಿಂದ ಖರೀದಿಸಿದ್ದಾರೆ ಹಾಗೂ ಎಷ್ಟು ರೂಪಾಯಿಗಳಿಗೆ ಖರೀದಿಸಿದ್ದಾರೆ ಎನ್ನುವದು ನನಗೆ ನೆನಪಿಲ್ಲ. ಜಮೀನು ಖರೀದಿಸಲು ವ್ಯವಸಾಯ ಮಾಡಿ ಬೇರೆಯವರ ಜಮೀನುಗಳನ್ನು ಸಾಗುವಳಿ ಮಾಡುವ ಮೂಲಕ ಖರೀದಿಸಿದ್ದಾರೆ. ನಮ್ಮ ಕುಟುಂಬಕ್ಕೆ ಕೃಷಿ ಹೊರುತು ಪಡಿಸಿ ಬೇರೆ ಆದಾಯದ ಮೂಲಗಳು ಇರುವುದಿಲ್ಲ. ದಾವಾ ಅನುಸೂಚಿ-ಅ ಮತ್ತು ಬ ಆಸ್ತಿಗಳು ನನ್ನ ಗಂಡ ಹಾಗೂ ಆತನ

ಸಹೋದರರು ದುಡಿದು ಗಳಿಸಿದ್ದಾರೆ ಎನ್ನುವದರ ಬಗ್ಗೆ ಯಾವುದೆ ದಾಖಲೆಗಳು ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಬಗ್ಗೆ ಯಾವುದೆ ದಾಖಲೆಗಳನ್ನು ಹಾಜರ ಪಡಿಸಿಲ್ಲ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಅನ್ನುತ್ತಾರೆ. ನನ್ನ ಗಂಡ ಹಾಗೂ ಆತನ ಸಹೋದರರು ದುಡಿದು ಎಷ್ಟು ಹಣ ಕೂಡಿ ಇಟ್ಟಿದ್ದರು ಹಾಗೂ ಎಷ್ಟು ಹಣವನ್ನು ನೀಡುವ ಮೂಲಕ ಖರೀದಿಸಿದ್ದಾರೆ ಎನ್ನುವ ಮೂಲಕ ಯಾವುದೆ ಲೆಕ್ಕ ಪತ್ರಗಳು ಇಲ್ಲದಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಯರು ನನ್ನ ಗಂಡ ಆತನ ಸಹೋದರ ಹಾಗೂ ಮಾವ ಎಲ್ಲರೂ ಸೇರಿ ದುಡಿದು ಗಳಿಸಿದ ಆಸ್ತಿಗಳು ಅಂದರೆ ಸರಿಯಲ್ಲ. ಜಮೀನು ಖರೀದಿಸುವ ಸಮಯದಲ್ಲಿ ನನ್ನ ಮಾವ ವೀರಭದ್ರಪ್ಪ ಜೀವಂತ ಇದ್ದ ಅಂದರೆ ನಿಜ. ಒಟ್ಟು ಕುಟುಂಬದ ಆದಾಯದಿಂದ ಜಮೀನುಗಳನ್ನು  ಖರೀದಿಸಿದ್ದರಿಂದ ಅವುಗಳಲ್ಲಿ ವಾದಿಯರಿಗೂ ಕೂಡಾ ಸಮಪಾಲು ಇದೆ ಅಂದರೆ ಸರಿಯಲ್ಲ.

ನಾವು ವಾದಿಯರಿಗೆ ಮೋಸ ಮಾಡಿ ಅವರಿಗೆ ಗೊತ್ತಿಲ್ಲದಂತೆ ನಮ್ಮ ಹೆಸರುಗಳನ್ನು ದಾಖಲಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ದಾವೆ ಚಾಲ್ತಿಯಲ್ಲಿರುವಾಗ ವಾದಿಯರ ಹೆಸರುಗಳನ್ನು ಉತಾರದಿಂದ ನನ್ನ ಗಂಡ ಹಾಗೂ ಆತನ ಸಹೋದರ 1ನೇ ಪ್ರತಿವಾದಿ ಸೇರಿಕೊಂಡು ತೆಗೆದುಹಾಕಿದ್ದಾರೆ ಅಂದರೆ ಸರಿಯಲ್ಲ.

ದಾವಾ ಅನುಸೂಚಿ-ಸಿ ಸರ್ವೆ ನಂ 23/2 ರಲ್ಲಿಯ 2 ಎಕರೆ 25 ಗುಂಟೆ ಜಮೀನು ನಮ್ಮ ಕುಟುಂಬಕ್ಕೆ ಹೇಗೆ ಬಂದಿದೆ ಎಂದು ನಾನು ದಾಖಲೆಗಳನ್ನು ನೋಡಿಲ್ಲ. ನಮ್ಮ ಕುಟುಂಬಕ್ಕೆ ಸರಕಾದಿಂದ ಬಂದಿರುತ್ತದೆ. ಸರಕಾರದಿಂದ ಮಂಜೂರದ ಆದ ಬಗ್ಗೆ ಸರಕಾರದ ಆದೇಶ ಪ್ರತಿ ಹಾಜರ ಪಡಿಸಿಲ್ಲ. ದಾವಾ ಅನುಸೂಚಿ-ಸಿ ಆಸ್ತಿ ಸರಕಾರದಿಂದ ಮಂಜೂರಾದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಜಮೀನು ಪಿತ್ರಾರ್ಜಿತ ಆಸ್ತಿ ಅಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ವಾದಿಯರಿಗೂ ಕೂಡಾ ಹಕ್ಕು ಇದೆ ಅಂದರೆ ಸರಿಯಲ್ಲ.

ವೀರಭದ್ರಪ್ಪ ಮರಣ ಹೊಂದಿದ ನಂತರ ವಾದಿಯರು ಹಾಗೂ ಪ್ರತಿವಾದಿಯರು ಹೆಸರು ದಾಖಲಾಗಿದ್ದು ಆ ಮೂಲಕ ಆಸ್ತಿಗಳಿಗೆ ಹಕ್ಕುದಾರರು ಅಂದರೆ ನಿಜ. ವಾದಿಯರಿಗೆ ತಪ್ಪು ನಿರೂಪಣೆ ಮಾಡುವ ಮೂಲಕ 1ನೇ ಪ್ರತಿವಾದಿ ಹಾಗೂ ನನ್ನ ಗಂಡ ತನ್ನ ಹೆಸರುಗಳನ್ನು ಖೊಟ್ಟಿಯಾಗಿ ಮೋಸದಿಂದ ದಾಖಲಿಸಿಕೊಂಡಿದ್ದಾರೆ ಅಂದರೆ ಸರಿಯಲ್ಲ. 2022 ರಲ್ಲಿ ನಮ್ಮ ಹಾಗೂ ಪ್ರತಿವಾದಿಯರ ಮದ್ಯ ವಿವಾದವುಂಟಾಗಿದ್ದರಿಂದ ದಾವೆ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲ. ವಾದಿಯರಿಗೆ ನಾವು ಆಸ್ತಿಯಲ್ಲಿ ಪಾಲು ಕೊಡದೆ ಇದ್ದುದರಿಂದ ದಾವೆ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲ. ವಾದಿಯರಿಗೆ ಆಸ್ತಿಗಳನ್ನು ಬಿಟ್ಟುಕೊಟ್ಟಿದ್ದಾರೆಂದು ದಿನಾಂಕ 04.06.2016 ರಂದು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಸದರಿ ದಾಖಲೆಗಳು ನೋಂದಣಿ ಆಗಿರುವುದಿಲ್ಲ. ದಿನಾಂಕ 04.06.2016 ರಂದು ವಾಟ್ನಿ ಪ್ರಕಾರ ನಮಗೆ ಹಕ್ಕು ಪ್ರಾಪ್ತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಡಿ-1 ಮತ್ತು 2 ರಲ್ಲಿ ವಾದಿಯರು ಸಹಿ ಮಾಡಿಲ್ಲ ಅಂದರೆ ಸರಿಯಲ್ಲ.  ನಿಡಿ-1

ಮತ್ತು 2 ರಲ್ಲಿರುವ ಸಹಿಗಳು ಹಾಗೂ ಹೆಬ್ಬೆಟ್ಟಿನ ಗುರುತು ವಾದಿಯರಿಗೆ ಸೇರಿದ್ದಲ್ಲ ಅಂದರೆ ಸರಿಯಲ್ಲ. ನಿಡಿ-1 ಮತ್ತು 2 ನ್ನು ನಾವು ಸೃಷ್ಟಿ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ನಿಡಿ-1 ಮತ್ತು 2 ನ್ನು ಯಾರು ಬರೆದಿದ್ದಾರೆ ಗೊತ್ತಿಲ್ಲ. ನಿಡಿ-1 ಮತ್ತು 2 ಕಾನೂನುಬಾಹಿರ ದಾಖಲೆಗಳು ಅಂದರೆ ಸರಿಯಲ್ಲ. ನಾವು ವಾದಿಯರಿಗೆ ಮೋಸ ಮಾಡಿ ಅವರ ಹೆಸರುಗಳನ್ನು ತೆಗೆದುಹಾಕಿದ್ದರಿಂದ ಪಾಲು ಕೇಳಿದ್ದು ಕೊಡದೆ ಇದ್ದುದರಿಂದ ದಾವೆ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲ. ನಾನು ಸಲ್ಲಿಸಿದ ಪ್ರತಿವಾದ ಪತ್ರಕ್ಕೆ ಸುಳ್ಳು ಮಾಹಿತಿ ನೀಡಿದ್ದೇನೆ ಅಂದರೆ ಸರಿಯಲ್ಲ. ನನಗೆ ದಾವೆ ಬಗ್ಗೆ ಯಾವುದೆ ಮಾಹಿತಿ ಇಲ್ಲದಿದ್ದರೂ ಕೂಡಾ ವಾದಿಯರ ಹಕ್ಕು ಮುಳಗಿಸುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿರುವುದರಿಂದ ಅವುಗಳಲ್ಲಿ ಹಕ್ಕು ಇದೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.